**ಹೆಚ್.ಆರ್.ಸಿ ಸಂಖ್ಯೆ: 1847/2012 ಮತ್ತು 1848/2012, 1962/2012 (ಬಿ-2),**

**ದಿನಾಂಕ 19/9/2018**

ಪೊಲೀಸ್‌ಅಧೀಕ್ಷಕರು, ಶಿವಮೊಗ್ಗ ಜಿಲ್ಲೆಇವರು ದಿನಾಂಕ 23/3/2012 ರಂದು ಶಿವಮೊಗ್ಗ ನಗರದಕೋಟೆ ಪೊಲೀಸ್‌ಠಾಣೆಯಲ್ಲಿಇರ್ಫಾನ್‌ಎನ್ನುವಯುವಕಅನುಮಾನಾಸ್ಪದವಾಗಿ ಮರಣ ಹೊಂದಿರುವ ಬಗ್ಗೆ ಫ್ಯಾಕ್ಸ್ ಮೂಲಕ ಆಯೋಗಕ್ಕೆ ದಿನಾಂಕ 24/3/2012 ರಂದು ತಿಳಿಸಿದ್ದು ಹೆಚ್.ಆರ್.ಸಿ.1847/2012 ಎಂದು ನೊಂದಣಿಯಾಗಿರುತ್ತದೆ.ಇದೇ ವಿಷಯದ ಬಗ್ಗೆ ಪೊಲೀಸ್ ಮಹಾನಿರ್ದೇಶಕರು, ಶಿವಮೊಗ್ಗ ರವರ ಮಾಹಿತಿ ಹಾಗೂ ಸಿಕ್ರಂ (ಖಔಅಊಖಇಒ)ರವರದೂರು ವಿಷಯಗಳ ಬಗ್ಗೆ ನೀಡಿದ್ದು ಹೆಚ್.ಆರ್.ಸಿ.1847/2012 ಹಾಗೂ 1962/2012 ಎಂದು ನೊಂದಣಿಯಾಗಿರುತ್ತವೆ. ಆಯೋಗವು ಸದರಿ ದೂರುಗಳ ವಿಷಯದ ಬಗ್ಗೆ ವರದಿ ಸಲ್ಲಿಸಲು ಪೊಲೀಸ್‌ಅಧೀಕ್ಷಕರು, ಶಿವಮೊಗ್ಗ ಜಿಲ್ಲೆಇವರಿಗೆ ಆದೇಶಿಸಿದ್ದು, ಇವರ ಪತ್ರ ಸಂಖ್ಯೆ: ಸಿ.ಆರ್.ಎಂ(1)/15/2011–12 ದಿನಾಂಕ29/5/2012 ರಲ್ಲಿಇರ್ಫಾನ್‌ಈತನುಅನುಮಾನಸ್ಪದವಾಗಿ ಮರಣ ಹೊಂದಿದ್ದು, ಶಿವಮೊಗ್ಗ ನಗರದಕೋಟೆ ಪೊಲೀಸ್‌ಠಾಣೆಯಲ್ಲಿಯು.ಡಿ.ಆರ್. ಸಂಖ್ಯೆ: 6/2012 ಕಲಂ 174(3) ಸಿಆರ್‌ಪಿಸಿ ರೀತ್ಯಾ ಪ್ರಕರಣದಾಖಲಾಗಿದ್ದು, ಪ್ರಕರಣದತನಿಖೆಯನ್ನು ನಿಷ್ಪಕ್ಷಪಾತವಾಗಿ ನಡೆಸಲುಡಿಎಸ್‌ಪಿ ಶಿಕಾರಿಪುರ, ಉಪ ವಿಭಾಗಇವರನ್ನು ನೇಮಕ ಮಾಡಲಾಗಿತ್ತು, ಆದರೆ ಸದರಿ ಪ್ರಕರಣದತನಿಖೆಯನ್ನು ಶ್ರೀ ಬಸವರಾಜು, ಡಿ.ವೈ.ಎಸ್.ಪಿ., ಹೆಚ್&ಬಿದಳ, ಸಿಐಡಿ., ಬೆಂಗಳೂರು ರವರು ಮುಂದುವರಿಸಿರುತ್ತಾರೆಂದು ಆಯೋಗಕ್ಕೆ ವರದಿ ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಪೊಲೀಸ್ ಮಹಾನಿರ್ದೇಶಕರು, ಸಿಐಡಿ ವಿಶೇಷ ಘಟಕಗಳು ಮತ್ತುಆರ್ಥಿಕ ಅಪರಾಧಗಳು, ಕಾರ್ಲಟನ್ ಭವನ, ಅರಮನೆರಸ್ತೆ, ಬೆಂಗಳೂರು ಇವರು ಸಂಖ್ಯೆ: 13/ಅಪರಾಧ/ಹೆಚ್&ಬಿ/ಸಿಐಡಿ/2012, ದಿನಾಂಕ 26/4/2013 ರಲ್ಲಿ ವರದಿಯನ್ನುಆಯೋಗಕ್ಕೆ ಸಲ್ಲಿಸಿ, ಸದರಿ ಪ್ರಕರಣದತನಿಖೆಯನ್ನು ಮುಕ್ತಾಯಗೊಳಿಸಲು ಆಯೋಗಕ್ಕೆಕೋರಿದ್ದು, ಆಯೋಗವು ದಿನಾಂಕ22/5/2017 ರಆದೇಶದಲ್ಲಿ ಸಿಐಡಿ ತನಿಖಾ ವರದಿಯುತೃಪ್ತಿದಾಯಕವಾಗಿರದ ಪ್ರಯುಕ್ತ, ಉನ್ನತ ಮಟ್ಟದತನಿಖೆಗಾಗಿ ಪೊಲೀಸ್‌ಅಧೀಕ್ಷಕರಿಂದ ವಿಚಾರಣೆ ನಡೆಸಿ,ವರದಿ ಸಲ್ಲಿಸಲು ಪೊಲೀಸ್ ಮಹಾನಿರ್ದೇಶಕರಿಗೆ ಆದೇಶಿಸಲಾಗಿತ್ತು. ಆದೇಶದಂತೆ ಪೊಲೀಸ್ ಮಹಾನಿರ್ದೇಶಕರು, ಸಿಐಡಿ ವಿಶೇಷ ಘಟಕಗಳು ಮತ್ತುಆರ್ಥಿಕ ಅಪರಾಧಗಳು ಇವರು ಸಂಖ್ಯೆ: 09/ಸಿಆರ್‌ಎಂ/ಸಿಎಎನ್‌ಡಿ/ ಸಿಐಡಿ/2017 ದಿನಾಂಕ 27/7/2018 ರಲ್ಲಿ ವರದಿ ಸಲ್ಲಿಸಿರುತ್ತಾರೆ. ವಿಚಾರಣೆಯಲ್ಲಿ ವೈದ್ಯಕೀಯ ದಾಖಲಾತಿಗಳು ಮತ್ತು ಸಾಕ್ಷಿಗಳ ಹೇಳಿಕೆಗಳಿಂದ ಮೃತಇರ್ಫಾನ್ ಎಂಬ ವ್ಯಕ್ತಿಯು ಪೊಲೀಸರ ಹಿಂಸೆಯಿಂದ ಮೃತಪಟ್ಟಿರುವ ಬಗ್ಗೆ ನಿಖರವಾದ ಸಾಕ್ಷ್ಯಾಧಾರಗಳು ಲಭ್ಯವಾಗದಕಾರಣಆಯೋಗವು ಪೊಲೀಸ್

ಮಹಾನಿರ್ದೇಶಕರು, ಸಿಐಡಿ ವಿಶೇಷ ಘಟಕಗಳು ಮತ್ತುಆರ್ಥಿಕ ಅಪರಾಧಗಳು ಇವರ ವರದಿಯನ್ನು ಹಾಗೂ ಪೂರಕ ದಾಖಲಾತಿಗಳನ್ನು ಪರಿಶೀಲಿಸಿ, ಪ್ರಕರಣಕ್ಕೆ ಸಂಬಂಧಪಟ್ಟಂತೆ ಶಿವಮೊಗ್ಗ ನಗರದಕೋಟೆ ಪೊಲೀಸ್‌ಠಾಣೆಯಯು.ಡಿ.ಆರ್. ಸಂಖ್ಯೆ: 6/2012 ರತನಿಖೆಯನ್ನು ಸಿಐಡಿ ತನಿಖಾಧಿಕಾರಿಗಳು ನಡೆಸಿದ ತನಿಖೆಯಲ್ಲಿ ಮೃತಇರ್ಫಾನ್ ಸಾವು ಆಕಸ್ಮಿಕ ಎಂದು ಸಲ್ಲಿಸಿದ ವರದಿಯನ್ನು ಉಪವಿಭಾಗೀಯ ದಂಡಾಧಿಕಾರಿಗಳು, ಶಿವಮೊಗ್ಗ ರವರು ಅಂಗೀಕರಿಸಿದ ಹಿನ್ನೆಲೆಯಲ್ಲಿ, ಸದರಿಯವರ ವರದಿ ಅಂಗೀಕರಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.